ಮೇರು ವ್ಯಕ್ತಿತ್ವ ಇರುವವರು ಸಾಮಾನ್ಯವಾಗಿ ಸೌಮ್ಯ ಸ್ವಭಾವವನ್ನೇ ಬೆಳೆಸಿಕೊಂಡಿರುತ್ತಾರೆ. ಯಶಸ್ಸಿನ ಉತ್ತುಂಗಕ್ಕೇರಿದರೂ, ಜಗತ್ತಿನ ಸತ್ಯವನ್ನು ಅರಿತು, ಜೀವನಪ್ರೀತಿಯ ಜೊತೆಗೆ ಮಾನವೀಯ ನೆಲೆಯಲ್ಲೇ ಮಾತಾಡುತ್ತಾರೆ, ವ್ಯವಹರಿಸುತ್ತಾರೆ. ಹೀಗಾಗಿ ಗೌರವ, ಪ್ರೀತಿಯನ್ನು ಹೆಚ್ಚಾಗಿ ಗಳಿಸಿರುತ್ತಾರೆ. ಈ ಮಾತಿಗೆ ನನ್ನ ಆತ್ಮೀಯರೂ, ತಾಯಿ ಸಮಾನರೂ ಆದ ಸರೋಜಾದೇವಿ ಅವರು ಉತ್ತಮ ಉದಾಹರಣೆಯಾಗುತ್ತಾರೆ.

ನಾನು ಸರೋಜಮ್ಮ ಅವರ ಜೊತೆ ಯಾವುದೇ ಸಿನಿಮಾದಲ್ಲಿ ನಟಿಸಿಲ್ಲ. ಆದರೆ ಅವರೊಂದಿಗೆ ತುಂಬ ಚೆನ್ನಾಗಿ ಒಡನಾಡಿದ್ದೀನಿ. ಅವರು ನಮ್ಮನ್ನು ಮಕ್ಕಳ ತರನೇ ನೋಡೋರು. ಚೆನ್ನಾಗಿ ಅಡ್ವೈಸ್ ಮಾಡೋರು. ಜೀವನವನ್ನು ಹೇಗೆ ಮುನ್ನಡೆಸಿಕೊಂಡು ಹೋಗಬೇಕು ಎನ್ನುವುದನ್ನು ಒಂದು ರೀತಿಯಲ್ಲಿ ನೀತಿ ಪಾಠ ಮಾಡೋರು. 'ನಿಮ್ಮ ಕಾಲ ಮೇಲೆ ನಿಂತ್ಕೊಳ್ಳಿ, ಚೆನ್ನಾಗಿ ಸಂಪಾದನೆ ಮಾಡಬೇಕು, ಹಣವನ್ನು ಉಳಿಸಿಟ್ಟುಕೊಳ್ಳಬೇಕು, ಕೈಯಲ್ಲಿ ಹಣ ಇದ್ದಾಗ ಒಡವೆ ಮಾಡಿಸಿಕೊಳ್ಳಿ. ಇದು ಆಪದ್ಧನ. ಮುಂದಕ್ಕೆ ಸಹಾಯಕ್ಕೆ ಬರುತ್ತೆ' ಎಂದೆಲ್ಲ ಹೇಳೋರು. ಹೀಗಾಗಿ ಸರೋಜಮ್ಮ ಹೇಳಿದ ಎಲ್ಲ 'ನೀತಿ ಪಾಠ'ಗಳನ್ನು ನಾನೂ ಪಾಲಿಸುತ್ತಿದ್ದೆ. ನನ್ನ ಒಂದೊಂದು ಸಿನಿಮಾ ರಿಲೀಸ್ ಆದಾಗಲೂ ಒಂದೊಂದು ವಿಧದ ಒಡವೆ ಮಾಡಿಸಿ ಇಟ್ಟುಕೊಳ್ಳುತ್ತಿದ್ದೆ. ಹಣ, ಹೊನ್ನು ಜತನದಿಂದ ಕಾಪಾಡಿಕೊಂಡರೆ ಮುಂದಿನ ಜೀವನ ಸುಗಮವಾಗುತ್ತದೆ ಎಂಬುದು ಸರೋಜಮ್ಮ ಅವರ ಖಚಿತ ನುಡಿಯಾಗಿತ್ತು.

ನನ್ನ ಜೊತೆ ಬಹಳ ವಿಚಾರಗಳನ್ನು ಮುಕ್ತವಾಗಿ ಚರ್ಚೆ ನಡೆಸೋರು. ಅವರ ಸಿನಿಮಾ, ವೈಯಕ್ತಿಕ ಜೀವನ, ಅವರ ತಾಯಿ ಬಗ್ಗೆ ಎಲ್ಲವನ್ನೂ ಹೇಳೋರು. ಅವರು ಹೇಳುವ ಆದರ್ಶಗಳು ನಾವು ಜೀವನದಲ್ಲಿ ಅಳವಡಿಸಿಕೊಳ್ಳುವಂತಿದ್ದವು. ಅವರು ನನ್ನನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ಅವರನ್ನು ನಾನು ಪ್ರೀತಿಯಿಂದ ಯಾವತ್ತೂ 'ಅಮ್ಮ' ಎಂದೇ ಕರೀತಿದ್ದೆ.

ನನ್ನ ಗಂಡ ವೇಣು ಅಂದ್ರೆ ಅವರಿಗೆ ತುಂಬಾ ಇಷ್ಟ. ಅವರನ್ನು ವೇಣು ಅಂತ ಕರಿತಿರಲಿಲ್ಲ. ಗೌಡ್ರೇ ಅನ್ನೋರು. ಆಗಾಗ ಅವರ ಮನೆಗೆ ಹೋಗ್ತಿದ್ದೆವು. ಪ್ರತಿ ಸಲ ಹೋದಾಗಲೂ ಊಟ ಮಾಡದೆ ಬರಲು ಬಿಡುತ್ತಿರಲಿಲ್ಲ. ಅವರಲ್ಲಿ ಬಹಳ ಸಮಯಪ್ರಜ್ಞೆ ಇತ್ತು. ಸಮಯ ಪರಿಪಾಲನೆ ಚೆನ್ನಾಗಿ ಮಾಡೋರು. ಎಲ್ಲೇ ಹೋಗೋದಾದರೂ ನಾವು ಹೇಳಿದ ಸಮಯಕ್ಕೆ ಹೋಗಬೇಕಿತ್ತು. ಐದು ನಿಮಿಷ ತಡವಾದರೂ ಚೆನ್ನಾಗಿ ಬೈಯೋರು. ಇವರ ಜೀವನಶಿಸ್ತು ಎಲ್ಲರೂ ಅನುಕರಣೆ ಮಾಡುವಂತಿತ್ತು. ಶಿಸ್ತಿಗೆ ಇನ್ನೊಂದು ಹೆಸರೇ ಸರೋಜಮ್ಮ ಎನ್ನಬಹುದು. ಜೀವನದಲ್ಲಿ ಶಿಸ್ತು, ಸಮಯ ಪಾಲನೆಯಲ್ಲಿ ಇರಬಹುದು, ಕೆಲಸದಲ್ಲಿ ಇರಬಹುದು, ಆ್ಯಕ್ಟಿಂಗ್‌ನಲ್ಲಿ ಆಗಿರಬಹುದು. ಇವರ ಬದುಕೇ ಒಂದು ರೀತಿಯ 'ಡಿಸಿಪ್ಲಿನ್ನು' ಎನ್ನಬಹುದು.

ಡ್ರೆಸಿಂಗ್ ಸೆನ್ಸ್, ಮೇಕಪ್ ಸೆನ್ಸ್ ತುಂಬ ಇತ್ತು. ಅವರೂ ತುಂಬ ಚೆನ್ನಾಗಿ ಡ್ರೆಸ್ ಮಾಡ್ಕೊಳ್ಳೋರು. ಒಂದು ದಿನವೂ ಮೇಕಪ್ ಮಾಡದೆ ಹೊರಗೆ ಹೋಗ್ತಿರಲಿಲ್ಲ. ನಾನು ಡ್ರೆಸಿಂಗ್ ಬಗ್ಗೆ ಅಷ್ಟೊಂದು ಕಾಳಜಿ ವಹಿಸುತ್ತಿರಲಿಲ್ಲ. ಇದಕ್ಕಾಗಿ ಅವರು ನನ್ನ ಬೈಯೋರು. ಅಲ್ಲದೆ 'ಹೊರಗೆ ಹೋಗುವಾಗ ಯಾವತ್ತೂ ನೀಟಾಗಿ ಡ್ರೆಸ್ ಮಾಡ್ಕೊಬೇಕು. ಒಳ್ಳೊಳ್ಳೆಯ ಬಟ್ಟೆ ಹಾಕಬೇಕು ಅಂತ. ಒಮ್ಮೆ ನಾನು ಚೆನ್ನಾಗಿರುವ ಡ್ರೆಸ್ ಹಾಕೊಂಡು ಅವರ ಮನೆಗೆ ಹೋಗಿದ್ದೆ. 'ಅಮ್ಮಾ, ನಾನು ಚೆನ್ನಾಗಿ ಡ್ರೆಸ್ ಮಾಡ್ಕೊಂಡು ಬಂದಿದ್ದೀನಿ ನೋಡಿ' ಎಂದೆ. ಆಗ ಅವರು 'ಇನ್ನೂ ಚೆನ್ನಾಗಿರುವ ಡ್ರೆಸ್ ಹಾಕಬೇಕು, ನೀನು ಒಬ್ಬ ನಟಿ, ಎಲ್ಲರೂ ನಿನ್ನನ್ನು ಗಮನಿಸ್ತಾರೆ, ಚಂದದ ಗೆಟಪ್‌ನಲ್ಲಿರಬೇಕು ಯಾವಾಗಲೂ' ಎನ್ನೋರು.

ನಟಿಯರಾದ ಹೇಮಾ ಚೌಧರಿ, ಪ್ರಮೀಳಾ ಜೋಷಾಯ್ ಅವರ ಜೊತೆಗೆ ಚೆನ್ನಾಗಿ ಡ್ರೆಸ್ ಮಾಡ್ಕೊಂಡು ದೇವಸ್ಥಾನಗಳಿಗೆ ಹೋಗೋರು.



ಪಾರ್ವತಮ್ಮ ರಾಜ್‌ಕುಮಾರ್ ಜೊತೆಗೆ ಅಭಿನಯ ಸರಸ್ವತಿಯ ಆತ್ಮೀಯ ಕ್ಷಣ.

ಎಲ್ಲರೊಂದಿಗೆ ಬಹಳ ಚೆನ್ನಾಗಿ ಬೆರೆಯೋರು, ಪ್ರೀತಿ ಮಾಡೋರು. ದೊಡ್ಡವರು, ಸಣ್ಣವರೆಂಬ ಭೇದವೇ ಅವರ ಬಳಿ ಇರುತ್ತಿರಲಿಲ್ಲ. ಅವರೊಂದಿಗೆ ಕಾಲ ಕಳೆಯೋದು ನಮಗೆಲ್ಲ ಬಹಳ ಖುಷಿಯಾಗೋದು. ಎರಡು ವರ್ಷ ಹಿಂದೆ ಸಿಂಗಪುರದಲ್ಲಿ ತಮಿಳು ಸಿನಿಮೋತ್ಸವ ಮಾಡಿದ್ರು. ಸರೋಜಮ್ಮ ಅವರೊಂದಿಗೆ ನಾನೂ ಅಲ್ಲಿ ಪಾಲ್ಗೊಂಡಿದ್ದೆ. ಉತ್ಸವದಲ್ಲಿ ಅಮ್ಮ ಮೊದಲ ಹಾಡಿಗೇ ಡ್ಯಾನ್ಸ್ ಮಾಡಿದ್ರು. ಇದನ್ನು ನಾನು ವಿಡಿಯೊ ಮಾಡಿ ಅವರಿಗೆ ಕಳಿಸಿದ್ದೆ. ಅಮ್ಮಂಗೆ ತುಂಬ ಖುಷಿಯಾಗಿತ್ತು. ಸಿಂಗಪುರದಲ್ಲಿ ಇವರೊಂದಿಗೆ ಕಳೆದ ದಿನ, ಕ್ಷಣಗಳನ್ನು ಮರೆಯೋ ಹಾಗೇ ಇಲ್ಲ.

ಇದು 2012ರ ಮಾತು. ನಾನು ಚಲನಚಿತ್ರ ಅಕಾಡೆಮಿ ಅಧ್ಯಕ್ಷೆಯಾಗಿದ್ದೆ. ಆಗ 'ಭಾರತೀಯ ಸಿನಿಮಾಕ್ಕೆ 100 ವರ್ಷದ ಸಂಭ್ರಮ' ಎಂಬ ಕಾರ್ಯಕ್ರಮ ಹಮ್ಮಿಕೊಂಡು ಸಿನಿಮಾದಲ್ಲಿನ ಘಟಾನುಘಟಿ ನಟಿಯರನ್ನು ಸನ್ಮಾನ ಮಾಡಿದ್ವಿ. ಸರೋಜಮ್ಮ ಅವರಿಗೆ ತುಂಬ ಖುಷಿಯಾಗಿತ್ತು. ಸನ್ಮಾನ, ಪುರಸ್ಕಾರಗಳಿಗೆ ಸಲ್ಲುವಂಥ ಅತ್ಯಂತ ಸೂಕ್ತ ವ್ಯಕ್ತಿ ಎಂದರೆ ಅದು ಸರೋಜಮ್ಮನೇ ಎಂಬುದು ನನ್ನ ಭಾವನೆ.

ನನ್ನ ಪ್ರತೀ ಸಿನಿಮಾವನ್ನು ತಪ್ಪದೇ ನೋಡ್ತಿದ್ದರು. ನೋಡಿ ಬಂದು ಎರಡು ನಿಮಿಷದೊಳಗೆ ಫೋನ್ ಮಾಡೋರು. ನನ್ನ ಆ್ಯಕ್ಟಿಂಗ್ ಅನ್ನು ಪ್ರಶಂಸೆ ಮಾಡೋರು. ಖುಷಿಪಡೋರು. ಅವರ ಕಾಲ್ ಬಂತು ಅಂದ್ರೆ ನನಗೂ ಒಂದು ರೀತಿಯ ಪುಳಕ ಆಗೋದು. ಅಷ್ಟು ಹೆಮ್ಮೆ ಎನಿಸೋದು. ನನ್ನ ಹಾಗೆ ಮಾಲಾಶ್ರೀ, ಶ್ರುತಿ, ಸುಧಾರಾಣಿ ಎಲ್ಲರನ್ನೂ ಬಹಳ ಹುರಿದುಂಬಿಸೋರು. ಇಷ್ಟು ಹಿರಿಯ ನಟಿ ನಮ್ಮನ್ನು ಆದರದಿಂದ ನೋಡುವುದು ನಮಗೆ ತುಂಬ ಖುಷಿ ಆಗೋದು.

ಇನ್ನೊಂದು ಘಟನೆ ಇಲ್ಲಿ ನೆನಪಿಸಿಕೊಳ್ಳಲೇಬೇಕು. ಅದು 2000ನೇ ಇಸವಿ. ವರನಟ ರಾಜಕುಮಾರ್ ಅವರನ್ನು ವೀರಪ್ಪನ್ ಅಪಹರಿಸಿಕೊಂಡು ಹೋದ ವರ್ಷ. ಕರುಣಾನಿಧಿ ಅವರು ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದರು. ವೀರಪ್ಪನ್ ಕಪಿಮುಷ್ಟಿಯಿಂದ ರಾಜಕುಮಾರ್ ಅವರನ್ನು ಬಿಡಿಸಿಕೊಳ್ಳುವಂತೆ ನಮ್ಮ ರಾಜ್ಯದಿಂದ ಸಿನಿಮಾ ರಂಗದ ಒಂದು ನಿಯೋಗ ಮದ್ರಾಸಿಗೆ ಹೋಗಿತ್ತು. ಸರೋಜಮ್ಮ ಅವರ ಜೊತೆಗೆ ನಾನೂ ಈ ನಿಯೋಗದಲ್ಲಿದ್ದೆ. ಮದ್ರಾಸ್ ಏರ್‌ಪೋರ್ಟಿನಿಂದ ಮುಖ್ಯಮಂತ್ರಿ ಕಚೇರಿವರೆಗೆ ಒಂದು ನಿರ್ದಿಷ್ಟ ಪ್ರೋಟೊಕಾಲ್‌ನಲ್ಲಿ ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿ ಸರೋಜಮ್ಮ ಅವರನ್ನು ಮುಖ್ಯಮಂತ್ರಿ ಗೌರವಿಸಿದ ರೀತಿ ನೋಡಿ ನಮಗೇ ಅಚ್ಚರಿಯಾಗಿತ್ತು. ಕನ್ನಡ ಸಿನಿಮಾದ ಮೊದಲ ಮಹಿಳಾ ಸೂಪರ್ ಸ್ಟಾರ್ ಆಗಿರುವ 'ಅಮ್ಮ' ಅವರಿಗೆ ಅಲ್ಲಿ ವಿಶೇಷ ಗೌರವ ಸಿಕ್ಕಿತ್ತು. ಅವರೊಂದಿಗೆ ನಮಗೂ...! ಈ ಘಟನೆ ಇನ್ನೂ ನನ್ನ ಮನದಾಳದಲ್ಲಿ ಹಾಗೇ ಬೆಚ್ಚಗೆ ಕುಳಿತಿದೆ.

ಸರೋಜಮ್ಮ ನಮ್ಮೆಲ್ಲರನ್ನು ಬಿಟ್ಟು ಹೋಗಿದ್ದಾರೆ. ಅವರ ಅಗಾಧವಾದ ಜೀವನಪ್ರೀತಿ, ಶಿಸ್ತು ನಮಗೆಲ್ಲ ಸದಾ ನೆನಪು ಅಷ್ಟೇ. ■